**ಇರಾನ್‌ನಲ್ಲಿ ಸಿನಿಮಾಗಳಲ್ಲಿ ಪತ್ನಿಯ ಮೈಯನ್ನು ಪತಿ ಮುಟ್ಟುವ ಹಾಗಿಲ್ಲ. ಅಂತಹ ದೃಶ್ಯಗಳಿಗೂ ಕತ್ತರಿ ಬೀಳುತ್ತದೆ. ಅಷ್ಟಾಗಿಯೂ ಕೂಡಾ ಅವರು ಜಗತ್ತಿನ ಶ್ರೇಷ್ಠ ಚಿತ್ರಗಳನ್ನು ಮಾಡುವವರ ಪೈಕಿ ಅಗ್ರಸ್ಥಾನದಲ್ಲಿದ್ದಾರೆ!**

ಸಿನಿಮಾಗಳಿಗೆ ನಿಯಂತ್ರಣ ಹೇರಿದರೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಆಗುವುದಿಲ್ಲ. ನಮ್ಮಲ್ಲಿ ಇಲ್ಲೇ ಗೊಂದಲ ಇರುವುದು. ಒಂದು ಬೇಕು ಎನ್ನುತ್ತೇವೆ, ಇನ್ನೊಂದನ್ನು ಬೇಡ ಎನ್ನುತ್ತೇವೆ.

ಜಗತ್ತಿನ ಅನೇಕ ದೇಶಗಳಲ್ಲಿ ಸಿನಿಮಾ ಸೆನ್ಸಾರ್ ಪದ್ಧತಿ ಚಾಲ್ತಿಯಲ್ಲಿದೆ. ನೇಪಾಳದಲ್ಲಿ ಸಿನಿಮಾಗಳಲ್ಲಿ ರಾಜ ಎಂದು ಹೇಳುವ ಹಾಗಿಲ್ಲ! ಏಕೆಂದರೆ ಅಲ್ಲಿ ಅರಸೊತ್ತಿಗೆಗೆ ರಾಜಕೀಯ ಮಾನ್ಯತೆ ಇದೆ. ನಮ್ಮಲ್ಲಿ ಈಗ ಆಗುತ್ತಿರುವುದೂ ಅದೇ. ಸಿನಿಮಾಗಳಲ್ಲಿ ಯಾವ ಅಂಶಗಳು ಇರಬಾರದು ಎನ್ನುವುದನ್ನು ಸೆನ್ಸಾರ್ ಮಂಡಳಿ ಪಟ್ಟಿ ಮಾಡಿದೆ. ಇಲ್ಲಿ ಕೆಲವು ಅಂಶಗಳನ್ನು ಯಾವ ರೀತಿಯಲ್ಲೂ ವ್ಯಾಖ್ಯಾನ ಮಾಡಬಹುದು. ಅದು ವ್ಯಾಖ್ಯಾನಿಸುವವರ ಮರ್ಜಿಗೆ ಸಂಬಂಧಿಸಿದ್ದು. 'ಯಾವುದೇ ಸಿನಿಮಾ ದೇಶದ ಸಾರ್ವಭೌಮತ್ವ ಹಾಗೂ ಏಕತೆಗೆ ಧಕ್ಕೆ ತರಬಾರದು' ಎಂದಿದೆ. ಸಿನಿಮಾ ಯಾವ ಏಕತೆಗೆ ಧಕ್ಕೆ ತರುತ್ತದೆ ಎಂಬುದೇ ಇಲ್ಲಿ ಪ್ರಶ್ನೆ. ಆದರೆ, ಇಲ್ಲಿ 'ಐಟಂ ಹಾಡು' ಪಾಸ್ ಆಗುತ್ತದೆ. ಇದು ದೇಶದ ಏಕತೆಗೆ ಧಕ್ಕೆ ತರುವುದಿಲ್ಲ ಅಲ್ಲವೇ? ಸಮಸ್ಯೆ ಇರುವುದೇ ಇಂತಹ ನಿಯಮ ರಚನೆ ಮಾಡಿರುವುದರಲ್ಲಿ.

ಸೆನ್ಸಾರ್ ಮಂಡಳಿಯ ಸುಧಾರಣೆಗೆ ಸಂಬಂಧಿಸಿದಂತೆ ಶ್ಯಾಮ್ ಬೆನಗಲ್ ಸಮಿತಿ ನೀಡಿರುವ ಶಿಫಾರಸುಗಳನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. 'ನಿರ್ದೇಶಕನ ಅಭಿಪ್ರಾಯವನ್ನು ಮಂಡಳಿ ಹರಣ ಮಾಡುವ ಹಾಗಿಲ್ಲ' ಎಂದು ಸಮಿತಿ ಖಡಾಖಂಡಿತವಾಗಿ ತಿಳಿಸಿದೆ. 'ಇದನ್ನು ಕಟ್ ಮಾಡಿ, ಅದನ್ನು ಕಟ್ ಮಾಡಿ ಎಂದು ಹೇಳುವ ಅಧಿಕಾರವೂ ಮಂಡಳಿಗೆ ಇಲ್ಲ' ಎಂದು ಹೇಳಿದೆ. ಇದು ಬಹಳ ಒಳ್ಳೆಯ ಮಾತು.

'ಸೆನ್ಸಾರ್ ಬೇಕಾ ಬೇಡವೇ' ಎಂಬ ವಿಷಯವನ್ನು ಒಂದು ಕ್ಷಣ ಪಕ್ಕಕ್ಕೆ ಇಡೋಣ. ಎಲ್ಲಕ್ಕಿಂತ ಮುಖ್ಯವಾಗಿ ಸೆನ್ಸಾರ್ ಎಂಬ ಪದ ಬಳಸುವುದೇ ತಪ್ಪು. 1983ರಲ್ಲಿ ಕೇಂದ್ರ ಸರ್ಕಾರ ಕಾನೂನು ತಂದು 'ಸೆನ್ಸಾರ್' ಎಂಬ ಪದವನ್ನು ಕಿತ್ತು ಹಾಕಿತು. ಅದು ಚಲನಚಿತ್ರ ಪ್ರಮಾಣೀಕರಣ ಮಂಡಳಿ. ಅದು ಏನಿದ್ದರೂ ಸಿನಿಮಾಕ್ಕೆ ಪ್ರಮಾಣಪತ್ರ ನೀಡಬಹುದೇ ಹೊರತು, ಅದಕ್ಕೆ ಸೆನ್ಸಾರ್ ಮಾಡುವ ಅಧಿಕಾರ ಇಲ್ಲ. ಮಂಡಳಿಯ ಹಿಂದಿನ ಅಧ್ಯಕ್ಷರಾದ ಲೀಲಾ ಸ್ಯಾಮ್ಸನ್ ಅವರ ಮಾತು ಅನುಕರಣೀಯ. 'ನಮ್ಮ ಕೆಲಸ ಸಿನಿಮಾಗಳಿಗೆ ಪ್ರಮಾಣಪತ್ರ ನೀಡುವುದಕ್ಕೆ ಸೀಮಿತ. ನಾವು ಯಾವುದೇ ಸಿನಿಮಾದ ದೃಶ್ಯಗಳಿಗೆ ಕತ್ತರಿ ಪ್ರಯೋಗ ಮಾಡುವುದಿಲ್ಲ. ಅದರಲ್ಲಿ ಆಕ್ಷೇಪಾರ್ಹ ಅಂಶ ಇದ್ದರೆ ಯಾರಿಗೆ ಆಕ್ಷೇಪಾರ್ಹ ಎನ್ನುವುದು ಮುಖ್ಯ. (ಅದು ಎಳೆಯ ಮಕ್ಕಳಿಗೋ, ಹಿರಿಯರಿಗೋ ಅಥವಾ ತರುಣರಿಗೋ?). ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಗ್ರೇಡ್ ಕೊಡುತ್ತೇವೆ' ಎಂದು ಅವರು ಹೇಳಿದ್ದರು.



ಚಲನಚಿತ್ರ ಪ್ರಮಾಣೀಕರಣ ಮಂಡಳಿಯ ಮುಖ್ಯಸ್ಥರು ತಮ್ಮ ವ್ಯಾಪ್ತಿ, ಚೌಕಟ್ಟನ್ನು ಮೀರಿ ಶಕ್ತಿಶಾಲಿ ಆಗಲು ಹೊರಟಾಗ ವಿವಾದಗಳು ಹುಟ್ಟಿಕೊಳ್ಳುತ್ತವೆ. ಈಗ ಆಗಿರುವುದು ಅದೇ.

ಈ ಹಿಂದೆ ಬೆಂಗಳೂರಿನಲ್ಲಿ ಒಬ್ಬರು ಸೆನ್ಸಾರ್ ಅಧಿಕಾರಿ ಇದ್ದರು. ಅವರು ಎಲ್ಲ ವಿಷಯದಲ್ಲೂ ಮಧ್ಯಪ್ರವೇಶಿಸಿ ಸಿನಿಮಾದಲ್ಲಿ ಯಾವ ಭಾಗ ಇರಬೇಕು, ಇರಬಾರದು ಎಂದು ಕಟ್ ಮಾಡಿಸುತ್ತಾ ಇದ್ದರು. ಇದು ಸೆನ್ಸಾರ್ ಅಧಿಕಾರಿಯ ಕೆಲಸ ಖಂಡಿತಾ ಅಲ್ಲ.

ಸಿನಿಮಾಗಳಲ್ಲಿ ಸೌಂದರ್ಯಪ್ರಜ್ಞೆಯ ವಿಷಯಗಳೂ ಇರುತ್ತವೆ. ಅವುಗಳ ಕುರಿತು ನಿರ್ಧಾರ ಮಾಡುವುದು ಸೆನ್ಸಾರ್ ಮಂಡಳಿಯವರು ಅಲ್ಲ, ಅದು ಪ್ರೇಕ್ಷಕರಿಗೆ ಸಂಬಂಧಿಸಿದ್ದು. ಮಂಡಳಿಯವರು ಕಾನೂನು ಚೌಕಟ್ಟಿನಲ್ಲಿ ಆ ಸಿನಿಮಾಗಳಿಗೆ ಪ್ರಮಾಣಪತ್ರ ನೀಡಬಹುದು ಅಷ್ಟೇ.

ಇತ್ತೀಚಿನ ದಿನಗಳಲ್ಲಿ ಸಿನಿಮಾಗಳನ್ನು ಹುಚ್ಚುಚ್ಚಾಗಿ ಸೆನ್ಸಾರ್ ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಮೊದಲಿನಿಂದಲೂ ಸೆನ್ಸಾರ್‌ಶಿಪ್ ಇಷ್ಟೊಂದು ಕಠಿಣ ಆಗಿರಲಿಲ್ಲ. ನಾವು ಲ್ಯಾಟಿನ್ ಅಮೆರಿಕ ದೇಶಗಳ ಸೆನ್ಸಾರ್‌ಶಿಪ್ ನೋಡಿದರೆ ಅಥವಾ ಇರಾನ್ ಅಥವಾ ಮಧ್ಯಪ್ರಾಚ್ಯ ದೇಶಗಳನ್ನು ನೋಡಿದರೆ ಅವರ ಸೆನ್ಸಾರ್‌ಶಿಪ್ ಮುಂದೆ ನಾವು ತುಂಬಾ ಉದಾರಿಗಳಾಗಿದ್ದೇವೆ. ಇರಾನ್‌ನಲ್ಲಿ ಸಿನಿಮಾಗಳಲ್ಲಿ ಪತ್ನಿಯ ಮೈಯನ್ನು ಪತಿ ಮುಟ್ಟುವ ಹಾಗಿಲ್ಲ. ಅಂತಹ ದೃಶ್ಯಗಳಿಗೂ ಕತ್ತರಿ ಬೀಳುತ್ತದೆ. ಅಷ್ಟಾಗಿಯೂ ಕೂಡಾ ಅವರು ಜಗತ್ತಿನ ಶ್ರೇಷ್ಠ ಚಿತ್ರಗಳನ್ನು ಮಾಡುವವರ ಪೈಕಿ ಅಗ್ರಸ್ಥಾನದಲ್ಲಿದ್ದಾರೆ. ಅಂದರೆ ಸೆನ್ಸಾರ್‌ಶಿಪ್ ಇದ್ದಾಗ ಅದನ್ನು ಹೇಗೆ ದಾಟಿ ಮುನ್ನಡೆಯಬೇಕು ಎಂಬುದನ್ನು ಅಲ್ಲಿನ ನಿರ್ದೇಶಕರು ಚೆನ್ನಾಗಿ ಕಲಿತುಕೊಂಡಿದ್ದಾರೆ.

ನಮ್ಮಲ್ಲಿ ಯಾರೂ 'ನಮ್ಮ ಅಭಿಪ್ರಾಯಕ್ಕೆ ಹರಣವಾಯಿತು' ಎಂದು ಕೇಳುತ್ತಿಲ್ಲ. ಬೇರೆ ಬೇರೆ ಕಾರಣಗಳಿಗೆ ಸೆನ್ಸಾರ್ ಬೇಡ ಎಂದು ಪ್ರತಿಪಾದಿಸುತ್ತಾ ಇದ್ದೇವೆ. ನಿರ್ದೇಶಕನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಸಿನಿಮಾಗಳು ನಿಷೇಧಕ್ಕೆ ಒಳಗಾದಾಗ ಯಾರೂ ಗಲಾಟೆ ಮಾಡುತ್ತಿಲ್ಲ. ಎಷ್ಟೋ ಸಾಕ್ಷ್ಯಚಿತ್ರಗಳು ಇಂತಹ ಕಾರಣಕ್ಕೆ ನಿಷೇಧಕ್ಕೆ ಒಳಗಾಗಿವೆ. ಆಗ ನಾವು ಧ್ವನಿ ಎತ್ತಿಲ್ಲ.

ಇತ್ತೀಚೆಗೆ ಸೆನ್ಸಾರ್ ಮಂಡಳಿಯವರು ಹೆಚ್ಚಿನ ಜವಾಬ್ದಾರಿ ಮೈಮೇಲೆ ಎಳೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಅತ್ಯುತ್ಸಾಹ ಹೆಚ್ಚಿದೆ. ಈ

**ಸಿನಿಮಾಗಳಲ್ಲಿ ಸೌಂದರ್ಯಪ್ರಜ್ಞೆಯ ವಿಷಯಗಳೂ ಇರುತ್ತವೆ. ಅವುಗಳ ಕುರಿತು ನಿರ್ಧಾರ ಮಾಡುವುದು ಸೆನ್ಸಾರ್ ಮಂಡಳಿಯವರು ಅಲ್ಲ, ಅದು ಪ್ರೇಕ್ಷಕರಿಗೆ ಸಂಬಂಧಿಸಿದ್ದು.**